ಈ ಕಾರಣದಿಂದ ಕೊರತೆ ಇರುವ ಎಲ್ಲ ಗ್ರಾಮಗಳಿಗೂ ಕುಡಿಯುವ ಸಿಹಿ ನೀರು ಒದಗಿಸಲು ಟೆಕ್ನಾಲಿಜಿ ಮಿಷನ್ ಕಾರ್ಯಕ್ರಮದಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಇಲ್ಲಿ ಉತ್ತರ ಕೊಟ್ಟಿದ್ದೇನೆ. ಧಾರವಾಡ ಜಿಲ್ಲೆಯಲ್ಲಿ ಯಾವ ಯಾವ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ ಇದೆ, ಅಂತಹ ಕಡೆಗಳಲ್ಲಿ ಈ ಒಂದು ಕಾರ್ಯಕ್ರಮದಡಿಯಲ್ಲಿ ಕ್ರಮ ತೆಗೆದುಕೊಂಡು ೭ನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ ಕುಡಿಯುವ ನೀರನ್ನು ಒದಗಿಸುವ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.— ನವಲಗುಂದ, ನರಗುಂದ ತಾಲ್ಲೂಕಿನಲ್ಲಿ ನೀರು ಇದ್ದರೆ ಸವಳಂ ಇರುತ್ತದೆ. ಟ್ಯಾಂಕ್‌ನಿಂದ ಬರತಕ್ಕಂಥ ನೀರು ಕುಡಿಯುವುದಕ್ಕೆ ಆಗುತ್ತದೆ. ಟ್ಯಾಂಕ್ ಇಲ್ಲದೆ ನೀರು ಕುಡಿಯಲಿಕ್ಕೆ ಆಗುವುದಿಲ್ಲ. ಅಲ್ಲಿ ಇಂಥ ದೊಡ್ಡ ಬೋರ್ ಹಾಕಿದರೂ ಸಹಿತ ಸಿಹಿ ನೀರು ಬೀಳುವುದಿಲ್ಲ. ಮಲಪ್ರಭದಿಂದ ನೀರನ್ನು ತಂದು ಕೊಡಬೇಕು. ಇಲ್ಲದೇ ಹೋದರೆ ಟ್ಯಾಂಕನ್ನು ಮಾಡಬೇಕು. ಹಳೇ ಟ್ಯಾಂಕನ್ನು ಡೀಶಿಲ್ಟ್ ಮಾಡುತ್ತೀರಾ ಎನ್ನುವುದು ಅವರ ಪ್ರಶ್ನೆ. ಮಲಪ್ರಭಾ ನೀರನ್ನು ತಂದು ಹಾಕಿದರೆ ಬಹಳ ಚೆನ್ನಾಗಿರುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ.— ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಕೆ.ಹೆಚ್. ಪಾಟೀಲರು ಹೇಳಿದ ಹಾಗೆ ಪ್ರಾಬ್ಲಂ ಇದೆ. ನವಲಗುಂದ ತಾಲ್ಲೂಕಿನ ೩೪ ಹಳ್ಳಿಗಳಲ್ಲಿ ಮತ್ತು ನರಗುಂದ ತಾಲ್ಲೂಕಿನ ೧೧ ಹಳ್ಳಿಗಳಲ್ಲಿ ಈ ಪ್ರಾಬ್ಲಂ ಇದೆ. ಈಗಾಗಲೇ ೭೯ ಲಕ್ಷ ರೂಪಾಯಿಗಳ ಯೋಜನೆ ನವಲಗುಂದಕ್ಕೆ ಮತ್ತು ನರಗುಂದಕ್ಕೆ ೧೨ ಲಕ್ಷ ರೂಪಾಯಿಗಳ ಯೋಜನೆಯನ್ನು ಮಾಡಿ ಟೆಕ್ನಾಲಜಿ ಮಿಷನ್‌ನಿಂದ ಪ್ರಾಬ್ಲಂ ಸಾಲ್ವ್ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಕಳಿಸಿದೆ. ಅಲ್ಲಿಂದ ಅಪ್ರೂವಲ್ ಆಗಿ ಬಂದ ಮೇಲೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಮಲಪ್ರಭಾದಿಂದ ನೀರು ತಂದುಕೊಡುವ ಬಗ್ಗೆ ಹೇಳಿದ್ದಾರೆ, ಅದು ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ. ಆದರೂ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಕೆ. ಕುಲಕರ್ಣಿ.— ಸಮುಪಾತಾಳಿ ಒಡ್ಡಿನ ಖಾತೆ ಏನಿದೆ ಅದರಿಂದ ಇದನ್ನು ಮಾಡಿಸಲಿಕ್ಕೆ ಬರುತ್ತದೆ ಅಥವಾ ಸಣ್ಣ ನೀರಾವರಿ ಖಾತೆಯಿಂದ ಮಾಡಿಸಲಿಕ್ಕೆ ಬರುತ್ತದೆ. ಆ ಖಾತೆಗಳಲ್ಲಿ ಇದನ್ನು ಹಾಕಿಸಿ ಮಾಡಿಸುತ್ತೀರಾ?

ಶ್ರೀ ಆರ್.ವಿ. ದೇಶಪಾಂಡೆ.— ಎಕ್ಸಾಮಿನ್ ಮಾಡಿಸುತ್ತೇನೆ.

ಬಿಜಾಪುರ ಪಟ್ಟಣದ ನೀರು ಸರಬರಾಜು ಯೋಜನೆಗಳ ಬಗ್ಗೆ

೨೩೭೮. ಶ್ರೀ ಎಂ.ಎಲ್. ಉಸ್ತಾದ್ (ಬಿಜಾಪುರ).— ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ನಗರದ ಕೂಡಿಯುವ ನೀರಿನ ಯೋಜನೆಗಳ ಬಾಕಿ ಇರುವ ಸಂಖ್ಯೆ ಎಷ್ಟು?

ಆ) ಕೊಲಾರ್ ಬ್ಯಾರೇಜಿನಿಂದ ಬಿಜಾಪುರ ನಗರದವರೆಗೆ ಮತ್ತೊಂದು ಕೊಳವೆಮಾರ್ಗವನ್ನು ಹಾಕಲು ಕೋರಿಕೆ ಬಂದಿರುವುದು ನಿಜವಲ್ಲವೇ?

ಇ) ಹಾಗಿದ್ದಲ್ಲಿ ಸರ್ಕಾರವು ಇದರ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಒಂದು ಯೋಜನೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಂ. ಎಲ್. ಉಸ್ತಾದ್.— ಸನ್ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೇ ಪ್ರಶ್ನೆಯಲ್ಲಿ ಬಿಜಾಪುರ ನಗರದ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಬಾಕಿ ಇರುವ ಯೋಜನೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೇನೆ. ಅದಕ್ಕೆ ಉತ್ತರದಲ್ಲಿ 'ಒಂದು ಯೋಜನೆ' ಎಂದು ಹೇಳಿದ್ದಾರೆ. ಎರಡನೇ ಪ್ರಶ್ನೆಯಲ್ಲಿ

ಕೋಲಾರ್ ಬ್ಯಾರೇಜಿನಿಂದ ಬಿಜಾಪುರ ನಗರದವರೆಗೆ ಇನ್ನೊಂದು ಅಡೀಷನಲ್ ಪೈಪ್‌ಲೈನ್ ಬಗ್ಗೆ ರಿಕ್ವೆಸ್ಟ್ ಬಂದಿರುವುದು ನಿಜವಲ್ಲವೇ ಎಂದು ಕೇಳಿದ್ದೇನೆ. ಅದಕ್ಕೆ ಇಲ್ಲ' ಎಂದು ಹೇಳಿದ್ದಾರೆ. ಒಂದು ಯೋಜನೆ ಪೆಂಡಿಂಗ್ ಇದೆ ಎಂದು ಹೇಳಿದ್ದಾರೆ. ಈ ಯೋಜನೆ ಯಾವುದು? Shifting from Baluthi to Kolar ಆ ಕೆಲಸ ಮುಗಿದು ಹೋಗಿದೆ, ಎರಡನೆಯದು ಎಲಿವೇಟೆಡ್ ರಿಸರ್ವಾಯರ್ ೧೫ ಲಕ್ಷದ್ದು ಆಗಬೇಕಾಗಿದೆ ಅದು ೧೯೮೧ರಿಂದ ಪೆಂಡಿಂಗ್ ಇದೆ. ಮೊದಲು ೮೬ ಲಕ್ಷ ಇತ್ತು. ಈಗ ಒಂದು ಕೋಟಿ ೩೫ ಲಕ್ಷಕ್ಕೆ ಬಂದಿದೆ. Whether that scheme is pending with the Government or shifting of headways from Baluthi to Kolar if it is pending it is completed now. I want to know whether still shifting work is pending. ಅದು ಎಂದು ಮುಗಿದು ಹೋಗಿದೆ? ಯಾವುದು ಪೆಂಡಿಂಗ್ ಇದೆ? ಎಂದು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.— ಈಗ ಹೇಳಿರುವುದೆಲ್ಲಾ ಜಾರಿಯಲ್ಲಿದೆ. ಬಲೂತಿಯಿಂದ ಕೋಲಾರಕ್ಕೆ ಶಿಫ್ಟ್ ಆಗಿ ಅಲ್ಲಿಂದ ನೀರು ಸರಬರಾಜು ಮಾಡುವಂಥ ೧೯೧.೪೬ ಲಕ್ಷದ ಯೋಜನೆ ಏನಿದೆ ಅದು ಪೂರ್ತಿಗೊಳ್ಳುತ್ತಾ ಇದೆ. ಇನ್ನು ಕೆಲವೇ ತಿಂಗಳಲ್ಲಿ ಅದು ಪೂರ್ಣವಾಗುತ್ತದೆ. ಅದಲ್ಲದೆ ಬೇರೆ ಒಂದು ರಿಕ್ವೆಸ್ಟ್ ಅಂದರೆ ನಗರಪಾಲಿಕೆ ಅಥವಾ ನಗರಸಭೆಯವರು ಅಪ್ರೂವ್ ಮಾಡಿ ಅದಕ್ಕೆ ತಗಲುವಂಥ ಹಣವನ್ನು ಭರಿಸುವಂಥ ಪ್ರಸ್ತಾವಗಳು ಸರ್ಕಾರಕ್ಕೆ ಬಂದಿಲ್ಲ. ಪೈಪ್‌ಗಳ ಮೂಲಕ ನೀರನ್ನು ಒದಗಿಸುವುದಕ್ಕೆ ಮಂಡಲಿ ಮಟ್ಟದಲ್ಲಿ ಅಂದಾಜು ಪಟ್ಟಿಗಳನ್ನು ಸಿದ್ಧ ಮಾಡುತ್ತಾ ಇದ್ದಾರೆ. ಅದು ಸರ್ಕಾರಕ್ಕೆ ಬಂದಿಲ್ಲ.

ಶ್ರೀ ಎಂ.ಎಲ್ ಉಸ್ತಾದ್.— ನನಗೆ ಬಂದಿರುವ ಇನ್‌ಫರ್ಮೇಷನ್ ಪ್ರಕಾರ ನಮ್ಮ ಅರ್ಬನ್ ವಾಟರ್ ಸಪ್ಲೈ ಡಿಪಾರ್ಟ್‌ಮೆಂಟ್‌ನಲ್ಲಿ One more additional pipe line is pending and the cost of that additional pipeline is 12 crores.

೧೦–೩೦ ಎ. ಎಂ.

ಸದ್ಯಕ್ಕೆ ಪರಿಸ್ಥಿತಿ ಏನಾಗಿದೆ ಅಂದರೆ, ಕಳೆದ ಮೂರು ದಿವಸಗಳಿಂದಲೂ ಬಿಜಾಪುರ ನಗರದಲ್ಲಿ ನೀರು ಸರಬರಾಜಾಗಿಲ್ಲ ಈ ವಿಷಯ 'ಕನ್ನಡಮ್ಮ'' ಪತ್ರಿಕೆಯಲ್ಲಿ ಬಂದಿದೆ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯಮಾಡುತ್ತೇನೆ. ಕೋಲಾರ ಬ್ಯಾರೇಜ್‌ನಿಂದ ಅಡಿಷನಲ್ ಪೈಪ್‌ಲೈನ್ ಹಾಕಿ, ಬಿಜಾಪುರ ನಗರದ ಜನರಿಗೆ ನೀರು ಕೊಡುತ್ತೇವೆಂದು ಆಶ್ವಾಸನೆ ಕೊಡಬೇಕು

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೆ, ಈಗ ಇರತಕ್ಕ ಜನಸಂಖ್ಯೆ ಒಂದು ಲಕ್ಷ ಇಪ್ಪತ್ತು ಸಾವಿರ ಅದಕ್ಕೆ ತಕ್ಕಂತೆ ಯೋಜನೆಯಾಗುತ್ತಿದೆ, ಈಗ ಳಳಿರ ಲಕ್ಷದ್ದು ಒಂದು ಎಷ್ಟಿವೇಟ್ ಮತ್ತು ೬೫ ಲಕ್ಷದ್ದು ಒಂದು ಎಷ್ಟಿಮೇಟ್‌ನ್ನು ಮಂಡಲಿಯವರು ಮಾಡಿದ್ದಾರೆ ಹೆಡ್ ವರ್ಕ್ಸ್ ಮತ್ತು ಷಿಫ್ಟಿಂಗ್ ವರ್ಕ್ಸ್ ಜೊತೆಗೆ ನಗರದಲ್ಲಿ ವಿತರಣೆ ಮಾಡುವಂಥ ಒಂದು ಸ್ಕೀಮು ಇದೆ. ಇದು ೧೩೦ಲಕ್ಷ ರೂಪಾಯಿ ಅಂದಾಜಿನ ಯೋಜನೆ ಓವರ್‌ಹೆಡ್ ಟ್ಯಾಂಕ್ ಕಟ್ಟಿ ನೀರು ಸರಬರಾಜು ಮಾಡುವಂಥಾದ್ದು ಇದರ ಬಗ್ಗೆ ಆದ್ಯತೆ ಕೊಡಬೇಕೆಂದು ಸರ್ಕಾರದ ಗಮನದಲ್ಲಿದೆ ಸದ್ಯಕ್ಕೆ ಕೋಲಾರ ಬ್ಯಾರೇಜ್‌ನಿಂದ ಪೈಪ್‌ಲೈನ್ ಹಾಕಲಾಗುತ್ತಿದೆ ಇದರಿಂದ ಬೇಸಿಗೆಯಲ್ಲಿ ನೀರಿನ ತೊಂದರೆ ಪರಿಹಾರ ವಾಗುತ್ತದೆ ಮುಂದಿನ ಜನಸಂಖ್ಯೆಗೆ ತಕ್ಕಂತೆ ಕಾರ್ಯಕ್ರಮಗಳನ್ನು ಬೇರೆ ಹಾಕಿಕೊಳ್ಳಬೇಕಾಗಿದೆ. ಹಣದ ಸಂಪನ್ಮೂಲ ನೋಡಿಕೊಂಡು ಕಾರ್ಯಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಎಲ್. ಉಸ್ತಾದ್ —೧೯೮೧ರ ಸೆನ್ಸಸ್ ಪ್ರಕಾರ ಬಿಜಾಪುರ ನಗರದ ಜನಸಂಖ್ಯೆ ೧ ಲಕ್ಷ ೬೨ ಸಾವಿರ ಈಗ ಅದು ಎರಡು ಲಕ್ಷ ಆಗಿದೆ ೧೯೧ ಲಕ್ಷ ರೂಪಾಯಿಗಳ ಕೆಲಸ ಪೂರ್ತಿಯಾಗಿದೆಯೆಂದು ಕೇಳಿದ್ದೇನೆ. ಎಲಿವೇಟೆಡ್ ರಿಸರ್ವಾಯರ್‌ನಿಂದ ೧೫ ಲಕ್ಷ ಗ್ಯಾಲನ್ ನೀರು ಸಿಗುತ್ತಿದೆ. ೧೩೫ ಲಕ್ಷರೂಪಾಯಿ ಯೋಜನೆ ಇದರಲ್ಲಿ ಕೂಡಿದೆಯೋ ಅಥವಾ ಬೇರೆ ಇದೆಯೋ ? ಅದನ್ನು ತಾವು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್. —ಮೂಲ ಯೋಜನೆಯಲ್ಲಿ ಇದು ಇಲ್ಲ ಇದು ಪ್ರತ್ಯೇಕವಾಗಿರುವ ಯೋಜನೆ.